

# ರಾಹುಲ್ ಅಶೋಕ್

## ಎಂಬ ವಿಶಿಷ್ಟ ಸಾಧಕ

**ನಿಸರ್ಗ ಆಯುರ್ವೇದಿಕ್ ರಿಸರ್ಚ್ ಸೆಂಟರ್‌ನ ಡಾ. ಅಶೋಕ್ ಕುಮಾರ್ ಅವರಿಗೆ 25ನೇ ವಯಸ್ಸಿನಲ್ಲಿ ರಾಷ್ಟ್ರಪ್ರಶಸ್ತಿ ಲಭಿಸಿದ್ದರೆ, ಅವರ ಮಗ ರಾಹುಲ್ ಅಶೋಕ್ ತಮ್ಮ 25ನೇ ವಯಸ್ಸಿನಲ್ಲಿ 'ಎಂಜಿನಿಯರಿಂಗ್ ಮತ್ತು ಔಷಧಿ ಸಸ್ಯ ಕೃಷಿ' ಯಲ್ಲಿ ನಡೆಸಿರುವ ಅನ್ವೇಷಣೆಗಾಗಿ ಗೌರವ ಡಾಕ್ಟರೇಟ್ ಲಭಿಸಿರುವುದು ಕಾಕತಾಳೀಯ.**

ಮೂಕ ಹಕ್ಕಿಯೂ ಹಾಡುತಿದೆ.. ಹಾಡುತಿದೆ... ಹಾಡುತಿದೆ.. ಭಾಷೆಗೂ ನಿಲುಕದ ಭಾವಗೀತೆಯ ಸಾರಿ ಸಾರಿ ಹಾಡುತಿದೆ. ಏನಿದು ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪನವರ ಕವಿತೆಯನ್ನು ಹೇಳಲು ಹೊರಟಿದ್ದಾರಲ್ಲ ಎಂದು ಆಶ್ಚರ್ಯಪಡಬಹುದು. ಆದರೆ, ಅದಲ್ಲ. ಇಲ್ಲಿ ಹೇಳ ಹೊರಟಿರುವುದು ಒಂದು ವಿಶಿಷ್ಟ (ಚೇತನ) ಹಕ್ಕಿಯ ಕಥೆ. ಇದನ್ನು ಮೂಕ ಹಕ್ಕಿಯು ಹಾಡುತಿದೆ... ಎನ್ನಲು ಮನಸ್ಸು ಒಪ್ಪುವುದಿಲ್ಲ. ಆದರೂ, ಹುಟ್ಟಿನಿಂದ ಮೂಕ ಮತ್ತು ಕಿವುಡಾಗಿದ್ದ ಹಕ್ಕಿಗೆ ಇಂದು ರೆಕ್ಕೆ ಪುಕ್ಕಗಳೆಲ್ಲ ಬಲಿತು ಬೆಳೆದು ಎತ್ತರೆತ್ತರಕ್ಕೇರಿ ಹಾರಾಡುವ ಸ್ಥಿತಿಗೆ ಬಂದಿದೆ. ಆ ಹಕ್ಕಿಗೀಗ ಇಪ್ಪತ್ತೈದರ ಹರೆಯ. ಆ ಮುದ್ದಾದ ಹಕ್ಕಿಯ ನಾಮಧೇಯ ರಾಹುಲ್ ಅಶೋಕ್. ತಂದೆ ಡಾ. ಅಶೋಕ್‌ಕುಮಾರ್, ಬೆಂಗಳೂರಿನ ನಿಸರ್ಗ ಆಯುರ್ವೇದಿಕ್ ಮೆಡಿಸನ್ ರಿಸರ್ಚ್ ಸೆಂಟರ್ ಸಂಸ್ಥಾಪಕರು. ರಾಹುಲ್ ಡಾ. ಅಶೋಕ್‌ಕುಮಾರ್ ಅವರ ಏಕ ಮಾತ್ರ ಪುತ್ರ.

ರಾಹುಲ್ ಹುಟ್ಟಿದಾಗ ಸ್ಕ್ರೀನ್ ಪ್ರಿಂಟಿಂಗ್ ಕಾಯಕ ಮಾಡುತ್ತಿದ್ದ ಅಶೋಕ್ ಕುಮಾರ್, ಎಲ್ಲರಂತೆ ತನ್ನ ಮಗನ ಲಾಲನೆ, ಪಾಲನೆಯಲ್ಲಿ ಮೈಮರೆತು ಅವನ ತೊದಲು ನುಡಿಗಳನ್ನು ಕೇಳಲು ಆತುರಪಡುತ್ತಿದ್ದರು. ಆದರೆ, ಒಂದೆರಡು ವರ್ಷ ಕಳೆದರೂ ಇತರ ಮಕ್ಕಳಂತೆ ಮಾತನಾಡದ ಮಗ ಬರೀ ಕೈಸನ್ನೆ ಮಾಡುತ್ತಿದ್ದ. ಕಿವಿಯೂ ಕೇಳಿಸುತ್ತಿಲ್ಲ, ಮಾತು ಬರುತ್ತಿಲ್ಲ ಎಂಬುದು ತಿಳಿದುಬಂದಾಗ ಆಕಾಶವೇ ಕಳಚಿ ತಲೆ ಮೇಲೆ ಬಿದ್ದಂತಾಗಿತ್ತು. ಆದರೂ ಎದೆಗುಂದದ ಅಶೋಕ್‌ಕುಮಾರ್ ಮಾಡುತ್ತಿದ್ದ ಕೆಲಸ, ಕಾರ್ಯಗಳನ್ನು ಬಿಟ್ಟು ತನ್ನ ಮಗನನ್ನು ಎತ್ತಿಕೊಂಡು ದೇಶ-ವಿದೇಶದ ವೈದ್ಯರನ್ನು ಸಂಪರ್ಕಿಸಿದರು. ಎಲ್ಲರಿಂದಲೂ ನಕಾರಾತ್ಮಕ ಉತ್ತರ ಸಿಗುತ್ತಿತ್ತು. ಆದರೂ, ಛಲ ಬಿಡದೆ ಸನಾತನ ವೈದ್ಯಶಾಸ್ತ್ರಗಳ ಅಧ್ಯಯನ ನಡೆಸಿ ಮಗನ ಸಮಸ್ಯೆಗೆ ಆಯುರ್ವೇದದಲ್ಲಿ ಮದ್ದಿರುವ ಬಗ್ಗೆ ತಿಳಿದು, ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ಅಲೆದು ಯೋಗಿಗಳನ್ನು, ಸಿದ್ಧರನ್ನು, ಪಂಡಿತರನ್ನು ಭೇಟಿ ಮಾಡಿದರು. ಅವರಿತ್ತ ಮಾರ್ಗದರ್ಶನದ ಮೇರೆಗೆ ಕಾಡು, ಮೇಡುಗಳನ್ನು ಅಲೆದು ಗಿಡಮೂಲಿಕೆಗಳನ್ನು ಎಕ್ಕಿ ತಂದು ಸ್ವತಃ ಔಷಧ ತಯಾರು ಮಾಡಿ ನಿತ್ಯ ಕುಡಿಸುತ್ತಾ ಬಂದ ಪರಿಣಾಮ ರಾಹುಲ್ ತೊದಲು ನುಡಿಗಳನ್ನು ಆಡಲು ಶುರುಮಾಡಿದ. ಇಂದು ನಿರರ್ಗಳವಾಗಲ್ಲದಿದ್ದರೂ ಅರ್ಥವಾಗುವಂತೆ ಮಾತನಾಡುತ್ತಾನೆ.

3ನೇ ತರಗತಿ ನಂತರ ಶಾಲೆ ಮುಂದುವರಿಸಲು ಸಾಧ್ಯವಾಗದ ರಾಹುಲ್, ಅಪ್ಪನ ಆಶ್ರಯದಲ್ಲಿ ಬೆಳೆದು ಶಿಕ್ಷಕರಿಂದ ಟ್ಯೂಷನ್ ಪಡೆದು 10ನೇ ತರಗತಿವರೆಗೆ ಓದಿದ್ದಾನೆ. ಕನ್ನಡ ಭಾಷೆ ಮಾತ್ರ ಬರುವ ಈತನಿಗೆ ಸಾಮಾಜಿಕ, ಆರ್ಥಿಕ, ಔಷಧಶಾಸ್ತ್ರದ ಜ್ಞಾನವನ್ನು ತಂದೆ ಅಶೋಕ್‌ಕುಮಾರ್ ತುಂಬಿದ್ದಾರೆ. ನಿಸರ್ಗ ಆಯುರ್ವೇದಿಕ್ ಸೆಂಟರ್‌ನ ಸಂಪೂರ್ಣ ವ್ಯವಹಾರ ನೋಡಿಕೊಳ್ಳುವುದರೊಂದಿಗೆ ಅಪ್ಪನ ಜೊತೆ

## ಡಾಕ್ಟರೇಟ್ ಪಡೆದ ವಿಶಿಷ್ಟ (ಚೇತನ) ಹಕ್ಕಿಯ ಯಶೋಗಾಥೆ

